ಹಾಗೆ ನೋಡಿದರೆ, ರಮಣನೂ ಸಹ ನಿರೂಪಕನ ತಂದೆ ತನ್ನ ಜಮೀನನ್ನು ಲಪಟಾಯಿಸಿ ಶೋಷಿಸುತ್ತಿದ್ದಾನೆಂದು ಅರಿತೇ ಬಂಡಾಯಗಾರನಾಗಿ ನಕ್ಸಲ್‌ವಾದಿ ಚಟುವಟಿಕೆಯಲ್ಲಿ ತೊಡಗುವಂತಾಗುತ್ತದೆ. ಆದರೆ, ಅವು ವಿಫಲ ಬಂಡಾಯಗಳಾಗುತ್ತವೆ.

ಈ ಕಾದಂಬರಿ ವೈಯಕ್ತಿಕ, ಸಾಮಾಜಿಕ, ಭೌತಿಕ–ಮಾನಸಿಕ, ಖಾಸಗೀ ಆಸಕ್ತಿ, ಸಾರ್ವಜನಿಕ ಕೆಲಸ ಕಾರ್ಯಗಳು ರಾಜಕೀಯ ಪ್ರಜ್ಞೆ–ಇವೆಲ್ಲವೂ ಒಂದರೊಳಗೊಂದು ಬೆರೆತು ಮಾನವೀಯ ನೆಲೆಗಳನ್ನೊಳಗೊಂಡ ಸಮಾಜ ನಿರ್ಮಾಣದ ಕನಸನ್ನು ಕಾಣುವ, ಅದಕ್ಕಾಗಿ ತುಡಿಯುವ ತಾತ್ವಿಕತೆಯ ಕಡೆಗೆ ಚಲಿಸುತ್ತದೆ. ರೇಖಾ, ಅನಂತಣ್ಣ, ರಮಣ, ಸುರೇಶ ಇವರೆಲ್ಲರೂ ಕ್ರಿಯಾವಂತಿಕೆಯಿಂದ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸಮಾಜದ ಕ್ರಿಯಾವಂತಿಕೆಗಾಗಿ ತುಡಿಯುವ ಮನಸ್ಸಿನವರು. ಕಾದಂಬರಿಯಲ್ಲಿನ ಘಟನೆಗಳು, ನಿರೂಪಣೆಯ ವಿವರಗಳ ಮೂಲಕ ಈ ವಿಚಾರಗಳು ತೆರೆದುಕೊಳ್ಳುತ್ತವೆ. ಕಾದಂಬರಿಯಲ್ಲಿ ನಿರೂಪಕನ ಹೆಂಡತಿ ವಿಜಿಯ ಬಂಡಾಯ, ಮಗಳು ರೇಖಾಳ ಬಂಡಾಯ ಇಬ್ಬರದೂ ಒಂದೇ ಬಗೆಯದು. ಇವರಿಬ್ಬರ ಬಂಡಾಯ ಪರಿಣಾಮಕ್ಕಾಗಿ ಮಾಡಿದ್ದು, ಅಷ್ಟೆ. ಬಂಡಾಯವು ಸ್ವಾತಂತ್ರ್ಯಕ್ಕಾಗಿ ಮಾಡುವಂತಹದ್ದು. ಸ್ವಾತಂತ್ರ್ಯವೆಂದರೆ ಆತ್ಮಾಭಿವ್ಯಕ್ತಿ. ತನಗೆ ಅನ್ನಿಸಿದ್ದನ್ನು ತನ್ನ ಅನುಭವಗಳನ್ನು ಧೈರ್ಯದಿಂದ ಹೇಳಬೇಕು. ಧೈರ್ಯವಾಗಿ ತನ್ನ ಅನ್ನಿಸಿಕೆಗಳನ್ನು ಹೇಳದಿದ್ದರೆ ನಾವು ನಮ್ಮ ಅನುಭವಗಳನ್ನು ಕಂಡುಕೊಳ್ಳುತ್ತಿಲ್ಲವೆಂದು, ನಮ್ಮೊಂದಿಗೆ ಪ್ರಯೋಗ ನಡೆಸುತ್ತಿಲ್ಲವೆಂದರ್ಥ. ಅಂತಹವರು ಸ್ವಾತಂತ್ರ್ಯ ಕಳೆದುಕೊಳ್ಳುತ್ತಾರೆ. ಇಲ್ಲಿ ಬರುವ ವಿಜಿ ಮತ್ತು ಆಕೆಯ ಮಗಳು ತಮಗೆ ಅನ್ನಿಸಿದ್ದನ್ನು, ಅನುಭವಗಳನ್ನು ಹೇಳಿಕೊಳ್ಳಲು ಆಗುತ್ತಿಲ್ಲ. ಅಂತಹ ಸಾಂಸ್ಕೃತಿಕ ಪರಿಸರವೂ ಇಲ್ಲ. ಆದ್ದರಿಂದ ಅವರಿಗೆ ಸ್ವಾತಂತ್ರ್ಯವೂ ಇಲ್ಲ. ರೇಖಾಳಿಗಂತೂ ಶಾಲೆಯಲ್ಲಿ ಕಾಲೇಜಿನಲ್ಲಿ, ಮನೆಯಲ್ಲಿ, ಗೆಳತಿಯರ ಮನೆಗೆ ಹೋಗುವುದರಲ್ಲಿ, ಕೊನೆಗೆ ಹಳ್ಳಿಯಲ್ಲೂ ತನ್ನಿಷ್ಟದಂತೆ ಇರಲು ಸ್ವಾತಂತ್ರ್ಯವಿಲ್ಲ. ಅಷ್ಟೇ ಅಲ್ಲ, ಇಲ್ಲಿ ಬರುವ ಎಲ್ಲಾ ಸ್ತ್ರೀಯರಿಗೂ ಸ್ವಾತಂತ್ರ್ಯ ಇಲ್ಲ. ರಮಣನು ಬಂಡಾಯವೇಳುತ್ತಾನೆ ನಿಜ. ಆದರೆ, ಈ ಬಂಡಾಯ ಆತ್ಮಹತ್ಯೆಯ ಇಲ್ಲವೇ ಸಾವಿನ ಕಡೆ ಚಲಿಸುವ ಬಂಡಾಯವಾಗುತ್ತದೆ.

"ಕಾಕತಾಳೀಯವೆಂಬುದಿಲ್ಲ, ಕೆಲವು ಘಟನೆಗಳ ಹಿಂದಿನ ಸಂಬಂಧ ಸೂತ್ರಗಳು ನಮಗೆ ಗೋಚರಿಸುವುದಿಲ್ಲ, ಅಷ್ಟೇ" ಎಂಬ ಮಾತುಗಳಿಂದ ಕಾದಂಬರಿ ಪ್ರಾರಂಭವಾಗುತ್ತದೆ. ಈ ಮಾತುಗಳ ಧ್ವನಿ ಕಾದಂಬರಿಯುದ್ದಕ್ಕೂ ಓದುಗನಲ್ಲಿ ಅನುರಣಿಸುತ್ತಾ ಹೋಗುತ್ತದೆ. ಜೊತೆಗೆ, ಕಾದಂಬರಿ ಬಹುಧ್ವನಿಯನ್ನು ಒಳಗೊಂಡಿರುವಂತಹದ್ದು. ಏಕೆಂದರೆ, ಕಾದಂಬರಿ ಪ್ರಕಾರ ಬೇರೆಬೇರೆ ವಿಭಿನ್ನ ವ್ಯಾಖ್ಯಾನಗಳಿಂದ ಪಡೆಪಡೆಯುತ್ತಾ ವಿಕಾಸವಾಗುತ್ತಲೇ ಇರುತ್ತದೆ. ಆದ್ದರಿಂದಲೇ, ರಷ್ಯಾದ ಸಾಹಿತ್ಯ ವಿಮರ್ಶಕ ಭಾಕ್ತಿನ್ ಇದನ್ನು ಬಹುಧ್ವನಿಯ ಪ್ರಕಾರವೆನ್ನುತ್ತಾನೆ. ಈ ಬಹುಧ್ವನಿಗಳು ಬೇರೆಬೇರೆ ಬಗೆಯ ವ್ಯಕ್ತಿತ್ವಗಳನ್ನು, ಪ್ರಪಂಚ ದೃಷ್ಟಿಗಳನ್ನು, ಪ್ರಜ್ಞೆಗಳನ್ನು, ಭಾವ ಲಕ್ಷಣಗಳನ್ನು ಒಳಗೊಂಡಿರುತ್ತವೆ. ಈ ಬಹುಧ್ವನಿಗಳಲ್ಲಿ ಒಂದು ಸಂವಾದವಿರುತ್ತದೆ. ಈ ಸಂವಾದದಲ್ಲಿ ಒಂದು ಸಮವಾದ ಇರುತ್ತದೆ. ಕಾದಂಬರಿಯಲ್ಲಿ ಈ ಬಗೆಯ ಸಮವಾದದ ನಿಲುವುಗಳು ಇವೆ.

ನಗರದ ಸಂಕೀರ್ಣವಾದ ಮಧ್ಯಮವರ್ಗದವರ ಬದುಕು, ಸ್ತ್ರೀ ಶೋಷಣೆ, ಹೆಣ್ಣಿನ ಮಾನಸಿಕ ಸ್ಥಿತಿಗತಿಗಳು, ಮಾನವೀಯ ಸಂಬಂಧಗಳು, ಆರ್ಥಿಕ–ರಾಜಕೀಯ–ಧಾರ್ಮಿಕ ಸಂಬಂಧದ ಸ್ವರೂಪಗಳು, ಗ್ರಾಮದ ಸ್ವರೂಪ, ಅಲ್ಲಿನ ಕುಟುಂಬ ವ್ಯವಸ್ಥೆ, ಇತ್ತೀಚಿನ ರಾಜಕೀಯ ಬೆಳವಣಿಗೆಗಳು ಹಳ್ಳಿಯಲ್ಲಿ ಉಂಟು ಮಾಡಿರುವ ಪರಿಣಾಮಗಳು, ಇವುಗಳ ಪರಸ್ಪರ ಸಂಬಂಧದ ಮೇಲೆ ನಿಂತಿರುವ ಮಾನವೀಯ ಸಂಬಂಧಗಳನ್ನು ಈ ಕಾದಂಬರಿ ಅನಾವರಣಗೊಳಿಸುತ್ತಾ ಹೋಗುತ್ತದೆ.